**8. ಗುಲ್ಬರ್ಗಾ ಜಿಲ್ಲೆಯಲ್ಲಿನ ಕಾಗನಾ ನದಿಗೆ ಬ್ಯಾರೇಜ್ ನಿರ್ಮಾಣ**

†**ಶ್ರೀ ಸುನೀಲ್ ವಲ್ಲಾಪುರೆ (ಶಹಾಬಾದ್)** : ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಯ ಶಹಾಬಾದ್ ವಿಧಾನಸಭಾ ಕ್ಷೇತ್ರದಲ್ಲಿ ಹಿಂದಿನ ಸರ್ಕಾರ ಸಣ್ಣ ನೀರಾವರಿ ಇಲಾಖೆಯಿಂದ ಆ ಸಮಯದಲ್ಲಿ ಅಂದಿನ ನೀರಾವರಿ ಸಚಿವರು ಹಾಗೂ ಇಂದಿನ ನೀರಾವರಿ ಸಚಿವರಾದ ಆದರಣೀಯ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಬ್ಯಾರೇಜ್‌ವೊಂದನ್ನು ಸ್ಯಾಂಕ್ಷನ್ ಮಾಡಿಕೊಟ್ಟಿದ್ದರು. ಅದಕ್ಕಾಗಿ ಆ ಸಮಯದಲ್ಲಿ ನಾನು ತುಂಬಾ ಸಂತೋಷಪಟ್ಟಿದ್ದೆ. ಹಿಂದುಳಿದ ಗುಲ್ಬರ್ಗಾ ಜಿಲ್ಲೆಯಲ್ಲಿರುವ ಕಾಗನಾ ನದಿಗೆ ಅಡ್ಡಲಾಗಿ ಮೀಸಲು ಕ್ಷೇತ್ರದಲ್ಲೊಂದು ಬ್ಯಾರೇಜ್ ನಿರ್ಮಾಣವಾಗುತ್ತಿರುವುದಕ್ಕಾಗಿ ಅಲ್ಲಿನ ರೈತಾಪಿ ಜನರು ಬಹಳ ಸಂತೋಷಪಟ್ಟಿದ್ದರು. ಇವೊತ್ತಿನ ದಿವಸ ಸದರಿ ಬ್ಯಾರೇಜ್ ಅನ್ನು ಎಸಿಸಿ ಸಿಮೆಂಟ್ ಕಂಪನಿಯವರಿಗೆ ವಹಿಸಿಕೊಡಲಾಗಿದೆ, ಸದರಿ ಕಂಪನಿಯವರು ಪೂರ್ತಿ ಹಣ ಭರಿಸಿ ಬ್ಯಾರೇಜ್ ನಿರ್ಮಿಸುತ್ತಿರುವುದಕ್ಕೂ ಕೂಡ ಸಂತೋಷಪಟ್ಟಿದ್ದೆವು. ಆದರೆ, ಇವೊತ್ತು ಎಸಿಸಿ ಕಂಪನಿಯವರು ಏನು ಮಾಡುತ್ತಿದ್ದಾರೆಂದರೆ, ಕೆಐಎಡಿಬಿ ಮುಖಾಂತರ Command Area ಇರುವ ರೈತಾಪಿ ಜನರ ಜಮೀನನ್ನು ಕೆಐಎಡಿಬಿಯವರು acquire ಮಾಡುತ್ತಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಇದೊಂದು ದೊಡ್ಡ ಪ್ರಮಾಣದಲ್ಲಿ ಹಗರಣವಾಗುತ್ತಿದೆ. ನನ್ನ ಕ್ಷೇತ್ರದಲ್ಲಿ ಬಹಳ ಅನ್ಯಾಯಗಳಾಗುತ್ತಿರುವುದರಿಂದ ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ನಮ್ಮ ಜಿಲ್ಲೆಯ ಸಮಸ್ಯೆಯನ್ನು ಕೇಳಬೇಕು. ಎಸಿಸಿ ಸಿಮೆಂಟ್ ಕಂಪನಿಯವರು ಕೆಐಎಡಿಬಿ ಮೂಲಕ ರೈತರ ಜಮೀನನ್ನು acquire ಮಾಡಿಕೊಳ್ಳುತ್ತಿದ್ದಾರೆ. ಅಲ್ಲಿ ಕೈಗಾರಿಕೆ ಸ್ಥಾಪಿಸಲು ನಮ್ಮದು ಯಾವುದೇ ಅಭ್ಯಂತರವಿಲ್ಲ. ಅಲ್ಲಿ ಕೈಗಾರಿಕೆ ಸ್ಥಾಪಿಸಲು ಯಾವುದೇ ಬೇಡಿಕೆಗಳು ಬಂದಿಲ್ಲ. ಇವೊತ್ತು ಕೆಐಎಡಿಬಿಯವರು ಎಸಿಸಿ ಸಿಮೆಂಟ್ ಕಂಪನಿಯ ಏಜೆಂಟರಾಗಿ ವರ್ತಿಸುತ್ತಿದ್ದಾರೆ. Command Areaದಲ್ಲಿರುವ ರೈತಾಪಿ ಜನರ ಜಮೀನೆಲ್ಲವನ್ನೂ ಕೆಐಎಡಿಬಿಯವರು acquire ಮಾಡಿಕೊಂಡು ಎಸಿಸಿ ಸಿಮೆಂಟ್ ಕಂಪನಿಯರಿಗೆ ಕೊಡುವುದಕ್ಕೆ ಹುನ್ನಾರ ನಡೆದಿದೆ. ಇವೊತ್ತು ನಮ್ಮ ಜಿಲ್ಲೆಯಲ್ಲಿ ಕೈಗಾರಿಕೆಗಳು ಬೆಳೆಯಲು ಸಾಕಷ್ಟು ರೀತಿಯಲ್ಲಿ ನಾವೆಲ್ಲರೂ ಸಹಕರಿಸುತ್ತೇವೆ. 1956ರಲ್ಲಿ ಎಸಿಸಿ ಸಿಮೆಂಟ್ ಕಂಪನಿಯ ಮದರ್ ಯುನಿಟ್‌ನವರು ಶಹಾಬಾದ್‌ನಲ್ಲಿ ಆ ಕಾರ್ಖಾನೆಯನ್ನು ಪ್ರಾರಂಭಿಸಿದರು. ಇವೊತ್ತು ಹೆಚ್‌ಎಂಟಿ ಕಾರ್ಖಾನೆಯವರು ಸರ್ಕಾರಕ್ಕೆ 126 ಕೋಟಿ 63 ಲಕ್ಷ ರೂಪಾಯಿಗಳಷ್ಟು ಹಣವನ್ನು ಬಾಕಿ ಕೊಡುವುದೇನಿದೆ, ಅದರತ್ತ ಸರ್ಕಾರ ಗಮನಹರಿಸುತ್ತಿಲ್ಲ. ಎಸಿಸಿ ಸಿಮೆಂಟ್ ಕಂಪನಿಯವರು ನಮ್ಮ ಜಿಲ್ಲೆಯ ಖನಿಜ ಸಂಪತ್ತನ್ನು ಲೂಟಿ ಮಾಡುತ್ತಿದ್ದಾರೆ. ಇವೊತ್ತು ಕೆಐಎಡಿಬಿಯವರು acquire ಮಾಡಿರುವ ಜಮೀನನ್ನು ಬಿಟ್ಟು ಶಹಾಬಾದ್‌ನಲ್ಲಿ ಎಸಿಸಿ ಸಿಮೆಂಟ್ ಕಂಪನಿಯನ್ನು ಪುನರ್ ಆರಂಭಿಸುವುದಕ್ಕೆ ನಾವೆಲ್ಲರೂ ಸಹಕರಿಸುತ್ತೇವೆ.

ಆದ್ದರಿಂದ ಶಹಾಬಾದ್‌ನಲ್ಲಿರುವ ಎಸಿಸಿ ಕಂಪನಿ Lime stone quarry ಸಾಕಷ್ಟು ಇದ್ದುದರಿಂದ WADI ನಗರ ಸುತ್ತಮುತ್ತ ಇರುವ KAIDB acquire ಮಾಡುತ್ತಿರುವ ಜಮೀನು ಕೈಬಿಡಬೇಕು ಹಾಗೂ ಶಹಾಬದ್ ಸುತ್ತಲು ಇರುವ ಎಸಿಸಿ ಜಮೀನು ತೆಗೆದುಕೊಂಡು ಶಹಾಬಾದ್ ಹೆಚ್.ಎಂ.ಟಿ. ಕಾರ್ಖಾನೆ ಪುನರಾಂಭಿಸಲು ಸರಕಾರ ಮಧ್ಯಸ್ಥಿಕೆ ವಹಿಸಿ ಶಾಹಾಬಾದ ಕಾರ್ಖಾನೆ ಎಸಿಸಿರವರಿಂದ ಪ್ರಾರಂಭಿಸಬೇಕು ಎಂದು ಮುಖ್ಯಮಂತ್ರಿಗಳಲ್ಲಿ ವಿನಂತಿಸುತ್ತೇನೆ.

**ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಮತ್ತು ತೋಟಗಾರಿಕಾ ಸಚಿವರು)** : ಮಾನ್ಯ ಅಧ್ಯಕ್ಷರೇ, ಪರಿಶೀಲಿಸುತ್ತೇವೆ.

**ಶ್ರೀ ಅರಗ ಜ್ಞಾನೇಂದ್ರ** : ವಿಷಯ ಪ್ರಸ್ತಾಪಿಸುವ ಬಗ್ಗೆ ನೋಟೀಸ್ ಕೊಟ್ಟು 3–4 ದಿವಸಗಳಾಗಿರುತ್ತದೆ. ಅದು ಸರ್ಕಾರಕ್ಕೂ ತಲುಪಿರುತ್ತದೆ. ಯಾರಾದರೊಬ್ಬರು ಮಂತ್ರಿಗಳಿಗೆ ಅದೊಂದು ಉತ್ತರವನ್ನು ತರಿಸುವುದಕ್ಕಾಗುವುದಿಲ್ಲವೇ?

**ಶ್ರೀ ಕೆ. ಶ್ರೀನಿವಾಸಗೌಡ** : ಮಾನ್ಯ ಸದಸ್ಯರು ಶೂನ್ಯ ವೇಳೆಗಿಂತ ಮೊದಲೇ ಕೇಳಿದ್ದರೆ ಅದಕ್ಕೆ ಉತ್ತರ ಸಿದ್ಧವಿರುತ್ತದೆ.

**ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ** : ಅದು ಇವೊತ್ತು ಕೇಳಿದ್ದಲ್ಲ. 10–15 ದಿವಸಗಳ ಹಿಂದೆಯೇ ಕೇಳಿದ್ದು.

## 9. Sub: Construction of bridges and roads in Belgaum and Khanapur Taluks-reg.

**Sri Manohar Kalappa Kinekar (Uchagaon)** : Sir, for the last 5-6 days in Belgaum and Khanapur Talukas due to heavy rains all rivers and naalas are overflowing fully. Near Ashoka on Tuesday, while going back to school, one high school girl while crossing the Kumbar naala fallen into the naala as there was no bridge across the naala. On the same day in the same naala one Maruthi car along with two people fell into the naala. Till yesterday, the police have found two bodies, They are searching for one body and still they have not got it. There are no proper bridges and roads there. This is the position of Khanapur evenafter 57 years of independence.

I am requesting the Government to have bridges and roads in Khanapur taluka so that people can travel safely. Even buses are not running for want of bridges and proper roads. Compensation should be paid to the families of the two persons who have died on humanitarian grounds. The persons who died are aged about 30-35 years and they are the main earning members in the family. Kindly look into the matter and pay compensation to their families. I also request the Government to have good bridges and roads in both Belgaum and Khanapur taluks.